ಮೈಸೂರು ಡಿಸ್ಟ್ರಿಕ್ಟ್.

ತಾರೀಖು 30ನೇ ಅಕ್ಟೋಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಯಡತೊರೆ ತಾಲ್ಲೂಕು ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಶೇವಾರಸಾಗಿ ಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯಿತು ಒಂದು ತಿಂಗಳಲ್ಲಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬಹುದು. ತಪ್ಪಿದರೆ 1877ನೇ ಇಸವಿ ಮೂರನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದನ್ನು ನಾಶಪಡಿಸಲ್ಪಡುತ್ತೆ.

ನಂಬರ್ 9.

ದಸ್ತಾವೇಜು ನಂಬರು.	ದಸ್ತಾವೇಜು ರಿಜಿಸ್ಟ್ರಿಗೆ ಪಡೆದಾದ ತಾರೀಖು.	ರಿಜಿಸ್ಟ್ರರ ತಾರೀಖು.	ದಸ್ತಾವೇಜು ಬರದು ಕೊಟ್ಟವನ ಹೆಸರು.	ದಸ್ತಾವೇಜು ಬರಿಸಿ ಕೊಂಡವನ ಹೆಸರು.	ದಸ್ತಾವೇಜಿನ ಸ್ವಭಾವ.
32 / 1882—83	7—4—82	7—4—82	ಯಿಡತೊರೆ ತಾಲ್ಲೂಕು ಲೆಕ್ಕಿಕುಪ್ಪೆ ಗ್ರಾಮದಲ್ಲಿ ಇರುವ ದೇವಪ್ಪ ಗೌಡನ ದ್ಯಾವೇಗೌಡನ ಹೆಂಡತಿ ಜರ್ಮಿನಿಂದ ಜೀವಿಸುವ ವಕ್ಕಲಿಗರ ಜಾತಿ ದೊಡ್ಡಿ	ಯಡತೊರೆ ತಾಲ್ಲೂಕು ಲೆಕ್ಕಿಕುಪ್ಪೆ ಗ್ರಾಮದಲ್ಲಿ ಇರುವ ವಕ್ಕಲಿಗರ ಜಾತಿ ಜಿರಾಯಿತು ಕಸಬಿನ ಮರಿಗೌಡ	100 ರೂಪಾಯಿನ ಭೂಸ್ಥಿತಿ ಕ್ರಯಪತ್ರ.

ನೋಟೀಸ್.

ತಾರೀಖು 1ನೇ ನವೆಂಬರ್ 1884.

ತಿರುಮಕೂಡ್ಲು ನರಸೀಪುರ ತಾಲ್ಲೂಕು ತಲಕಾಡು ಸಮೀಪದಲ್ಲಿರುವ ಅಕ್ಕೂರು ಗ್ರಾಮದಲ್ಲಿ ಕಲರಾ ಯಾನೆ ಉಬಾಲ್ ಜ್ವಾಲಾಭ್ ವೃಪದ್ರವ ವ್ಯಾಪಿಸಿರುವದರಿಂದ ತಲಕಾಡಿನಲ್ಲಿ ನಡಿಯುವ ಪಂಚಲಿಂಗ ದರುಶನಾರ್ಥವಾಗಿ ಹೋಗುವ ಜನಗಳಿಗೆ ಯಿದರಿಂದುಂಟಾಗುವ ಅಪಾಯವನ್ನ ಕುರಿತು ಯಿಚ್ಛರಿಸಿದೆ.

ಅಬ್ದುಲ್‌ಖಾದರ್, ಕೆ. ಬಿ.,
ಡೆಪ್ಯೂಟಿ ಕಮ್ಮಿಷನರ್ ವ ರಿಜಿಸ್ಟ್ರಾರ್.

ನಗರ ಡಿವೀಜ್ಞ.

ನಗರ ಡಿವೀಜ್ಞ ಡಿಸ್ಟ್ರಿಕ್ಟ್ ಜಡ್ಜ್‌ರಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 98.

ಮೃತಪಟ್ಟ ಗೌಸ್‌ಖಾನನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ವಾರಸಲ್ಲೀಖಾನನು, ಮೃತಪಟ್ಟ ಸದರೀ ಗೌಸ್‌ಖಾನನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ಸ್ಥಳದ ಗೌಸ್‌ಖಾನನು ಸದರೀ ಚಿಕ್ಕಮಗಳೂರು ವಾಸಸ್ಥನಾಗಿ ಮೃತಪಟ್ಟ ಗೌಸ್‌ಖಾನನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾನೆ.